CCE-II-RR/PR/NSR/NSPR(B)/999/8044

**B**

**ಜೂನ್ 2024 ರ ಪರೀಕ್ಷೆ - 2**

**JUNE 2024 EXAMINATION - 2**

Question Paper Serial No.

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

**CCE RR/PR/ NSR/NSPR**
**Reduced Syllabus**

**ಸಂಕೇತ ಸಂಖ್ಯೆ : 97-K**
**Code No. : 97-K**

# ವಿಷಯ : ರಾಜ್ಯಶಾಸ್ತ್ರ

# Subject : POLITICAL SCIENCE

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Repeater / Private Repeater / NSR / NSPR)**

ದಿನಾಂಕ : 20. 06. 2024 ] [ Date : 20. 06. 2024
ಸಮಯ : ಬೆಳಗ್ಗೆ 10-15 ರಿಂದ ಮಧ್ಯಾಹ್ನ 1-30 ರವರೆಗೆ ] [ Time : 10-15 A.M. to 1-30 P.M.
ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 47 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ***ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣವನ್ನು ಅನುಸರಿಸಿ), ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

**20. 06. 2024**

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

ಇಲ್ಲಿಂದ ಕತ್ತರಿಸಿ

**Tear here**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :**

**10 × 1 = 10**

1. ಸಂವಿಧಾನದ ರಚನಾ ಸಭೆಯಲ್ಲಿ ಧ್ಯೇಯಗಳ ನಿರ್ಣಯವನ್ನು ಮಂಡಿಸಿದವರು

(A) ಡಾ. ಬಾಬುರಾಜೇಂದ್ರ ಪ್ರಸಾದ್

(B) ಕೆ.ಎಂ. ಮುನ್ಷಿ

(C) ಜವಾಹರಲಾಲ್ ನೆಹರೂ

(D) ಡಾ. ಬಿ.ಆರ್. ಅಂಬೇಡ್ಕರ್

2. ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ಅಳವಡಿಸಲಾಗಿರುವ ಸಂವಿಧಾನದ ಭಾಗ

(A) 4 ನೇ ಭಾಗ

(B) 6 ನೇ ಭಾಗ

(C) 3 ನೇ ಭಾಗ

(D) 8 ನೇ ಭಾಗ

3. ನಾವು ಗಣರಾಜ್ಯ ದಿನವೆಂದು ಪ್ರತಿವರ್ಷ ಆಚರಿಸುವುದು

(A) ಆಗಸ್ಟ್ 15

(B) ಜನವರಿ 26

(C) ಅಕ್ಟೋಬರ್ 2

(D) ನವೆಂಬರ್ 14

4. ರಾಜ್ಯನೀತಿ ನಿರ್ದೇಶಕ ತತ್ವಗಳಲ್ಲಿ ಸಮಾಜವಾದಿ ಚಿಂತನೆಯನ್ನು ಆಧರಿಸಿರುವ ತತ್ವ

(A) ಸಮಾನ ಕೆಲಸಕ್ಕೆ ಸಮಾನ ವೇತನ

(B) ಪಾನ ನಿಷೇಧ ಜಾರಿ

(C) ಉಚಿತ ಮತ್ತು ಕಡ್ಡಾಯ ಶಿಕ್ಷಣ

(D) ಐತಿಹಾಸಿಕ ಸ್ಮಾರಕ ಮತ್ತು ವಸ್ತುಗಳ ಸಂರಕ್ಷಣೆ

5. ನಮ್ಮ 'ಸಂವಿಧಾನದ ಒಡವೆ' ಎಂದು ಕರೆಯಲಾಗುವುದು

(A) ಮೂಲಭೂತ ಹಕ್ಕುಗಳು

(B) ಮೂಲಭೂತ ಕರ್ತವ್ಯಗಳು

(C) ರಾಜ್ಯನೀತಿ ನಿರ್ದೇಶಕ ತತ್ವಗಳು

(D) ಪ್ರಸ್ತಾವನೆ

6. ಕರ್ನಾಟಕ ಲೋಕಸೇವಾ ಆಯೋಗದ ಕೇಂದ್ರ ಕಚೇರಿ ಇರುವ ಸ್ಥಳ

(A) ಬೆಳಗಾವಿ

(B) ಬೆಂಗಳೂರು

(C) ಮೈಸೂರು

(D) ಕಲಬುರ್ಗಿ

7. ಪಂಚಾಯತ್‌ರಾಜ್ ವ್ಯವಸ್ಥೆಯ ಬೆನ್ನೆಲುಬು

(A) ಗ್ರಾಮ ಪಂಚಾಯಿತಿ

(B) ಜಿಲ್ಲಾ ಪಂಚಾಯಿತಿ

(C) ಗ್ರಾಮಸಭೆ

(D) ತಾಲ್ಲೂಕು ಪಂಚಾಯಿತಿ

8. ಮೂಲಭೂತ ಹಕ್ಕುಗಳ ರಕ್ಷಕ

(A) ಜಿಲ್ಲಾ ನ್ಯಾಯಾಲಯ

(B) ಜನತಾ ನ್ಯಾಯಾಲಯ

(C) ಉಚ್ಚ ನ್ಯಾಯಾಲಯ

(D) ಸರ್ವೋಚ್ಚ ನ್ಯಾಯಾಲಯ

9. ರಾಜ್ಯ ಲೋಕಸೇವಾ ಆಯೋಗದ ರಚನೆಗೆ ಅವಕಾಶ ನೀಡಿರುವ ಸಂವಿಧಾನದ ವಿಧಿ

(A) 315 ನೇ ವಿಧಿ

(B) 323 ನೇ ವಿಧಿ

(C) 231 ನೇ ವಿಧಿ

(D) 168 ನೇ ವಿಧಿ

10. ರಾಜ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನು ನೇಮಕ ಮಾಡುವವರು

(A) ರಾಷ್ಟ್ರಪತಿ

(B) ಉಪರಾಷ್ಟ್ರಪತಿ

(C) ಪ್ರಧಾನ ಮಂತ್ರಿ

(D) ಉಪ ಪ್ರಧಾನ ಮಂತ್ರಿ

**II.** 11. ***A*-ಪಟ್ಟಿಯ ಅಂಶಗಳನ್ನು *B*-ಪಟ್ಟಿಯ ಸಂವಿಧಾನಗಳೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :** **5 × 1 = 5**

| *A*-ಪಟ್ಟಿ | *B*-ಪಟ್ಟಿ |
|---|---|
| (A) ಗ್ರಾಮ ಪಂಚಾಯಿತಿ | (i) ಮುಖ್ಯ ಕಾರ್ಯನಿರ್ವಹಣಾಧಿಕಾರಿ |
| (B) ಜಿಲ್ಲಾ ಪಂಚಾಯಿತಿ | (ii) ಮಿಲಿಟರಿ ಅಧಿಕಾರಿ |
| (C) ನಗರಸಭೆ | (iii) ಮುಖ್ಯಾಧಿಕಾರಿ |
| (D) ಪುರಸಭೆ | (iv) ಆಯುಕ್ತರು |
| (E) ದಂಡು ಪ್ರದೇಶ | (v) ಮಹಾಪೌರರು |
| | (vi) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ |
| | (vii) ಕಾರ್ಯ ನಿರ್ವಹಣಾಧಿಕಾರಿ |

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **15 × 1 = 15**

12. ಭಾರತ ಸಂವಿಧಾನ ರಚನಾ ಸಭೆಯ ಅಧ್ಯಕ್ಷರು ಯಾರು ?

13. ಭಾರತ ಸಂವಿಧಾನದ 'ಮ್ಯಾಗ್ನಕಾರ್ಟ್' ಎಂದು ಯಾವುದನ್ನು ಕರೆಯಲಾಗಿದೆ ?

14. ನಮ್ಮ ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ಯಾವ ದೇಶದ ಸಂವಿಧಾನದಿಂದ ಎರವಲು ಪಡೆಯಲಾಗಿದೆ ?

15. ಉದಾರವಾದಿ ತತ್ವಗಳನ್ನು ವ್ಯಾಖ್ಯಾನಿಸಿ.

16. ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರನ್ನು ಯಾರು ನೇಮಕ ಮಾಡುತ್ತಾರೆ ?

17. ಸಂವಿಧಾನ ಎಂದರೇನು ?

18. ಭ್ರಾತೃತ್ವವನ್ನು ವ್ಯಾಖ್ಯಾನಿಸಿ.

19. "ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳಿಗೊಸ್ಕರ ಇರುವ ಸರ್ಕಾರವೇ ಪ್ರಜಾಪ್ರಭುತ್ವ" ಎಂದು ಹೇಳಿದವರು ಯಾರು ?

20. ಡಾ. ಬಿ.ಆರ್. ಅಂಬೇಡ್ಕರ್‌ರವರು ಯಾವ ವಿಧಿಯನ್ನು ಸಂವಿಧಾನದ 'ಆತ್ಮ ಮತ್ತು ಹೃದಯ' ಎಂದು ಕರೆದಿದ್ದಾರೆ ?

21. ಬಂಧಿ ಪ್ರತ್ಯಕ್ಷೀಕರಣ ಎಂದರೇನು ?

22. ಮಹಾನಗರ ಪಾಲಿಕೆ ಸದಸ್ಯರನ್ನು ಏನೆಂದು ಕರೆಯುತ್ತಾರೆ ?

23. ಏಕ ಪೌರತ್ವ ಎಂದರೇನು ?

24. ರಾಜ್ಯದೊಳಗಿನ ಅತ್ಯುನ್ನತ ನ್ಯಾಯಾಲಯ ಯಾವುದು ?

25. ನ್ಯಾಯಿಕ ವಿಮರ್ಶೆ ಎಂದರೇನು ?

26. "ಗ್ರಾಮಪಂಚಾಯಿತಿಗಳು ಭಾರತದ ಸ್ವಾಯತ್ತ ಸರ್ಕಾರದ ತಳಹದಿಯಾಗಿವೆ." ಎಂದು ಹೇಳಿದವರು ಯಾರು ?

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**14 × 2 = 28**

27. ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ ಎಂದರೇನು ?

28. ಸಂವಿಧಾನದ ಪ್ರಸ್ತಾವನೆಯಲ್ಲಿರುವ ಮುಖ್ಯಾಂಶಗಳನ್ನು ಪಟ್ಟಿ ಮಾಡಿ.

29. ಶಿಕ್ಷಣ ಹಕ್ಕು ಕಾಯ್ದೆಯ ಮುಖ್ಯಾಂಶಗಳು ಯಾವುವು ?

30. ಸಂವಿಧಾನದ ರಚನಾ ಕಾರ್ಯಕ್ಕಾಗಿ ರಚಿಸಲಾದ ಪ್ರಮುಖ ಸಮಿತಿಗಳು ಹಾಗೂ ಉಪಸಮಿತಿಗಳು ಎಷ್ಟು ?

31. ರಾಜ್ಯನೀತಿ ನಿರ್ದೇಶಕ ತತ್ವಗಳ ಆಧಾರದಲ್ಲಿ ಜಾರಿಗೆ ತಂದಿರುವ ಕಾರ್ಯಕ್ರಮಗಳನ್ನು ಹೆಸರಿಸಿ.

32. ರಾಷ್ಟ್ರದ ಐಕ್ಯತೆ ಮತ್ತು ಭಾವೈಕ್ಯತೆಯನ್ನು ಬೆಳೆಸುವಲ್ಲಿ ನಮ್ಮ ಪಾತ್ರವೇನು ?

33. ಗಣರಾಜ್ಯವನ್ನು ವ್ಯಾಖ್ಯಾನಿಸಿ.

34. ಮಾಹಿತಿ ಹಕ್ಕು ಕಾಯಿದೆಯ ಮಹತ್ವವನ್ನು ತಿಳಿಸಿ.

35. ರಾಜ್ಯನೀತಿ ನಿರ್ದೇಶಕ ತತ್ವಗಳಿಗೂ ಮತ್ತು ಮೂಲಭೂತ ಹಕ್ಕುಗಳಿಗೂ ಇರುವ ಯಾವುದಾದರೂ ಎರಡು ವ್ಯತ್ಯಾಸಗಳನ್ನು ಪಟ್ಟಿ ಮಾಡಿ.

36. ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಲು ಇರಬೇಕಾದ ಅರ್ಹತೆಗಳೇನು ?

37. ಕಂದಾಯ ನ್ಯಾಯಾಲಯಗಳು ಹೊಂದಿರುವ ಶ್ರೇಣಿಗಳನ್ನು ತಿಳಿಸಿ.

38. ಜಿಲ್ಲಾ ಪಂಚಾಯಿತಿಯ ಸ್ಥಾಯಿ ಸಮಿತಿಗಳು ಯಾವುವು ?

39. ರಾಜ್ಯ ಲೋಕಸೇವಾ ಆಯೋಗದ ಸದಸ್ಯರಾಗಲು ಇರಬೇಕಾದ ಅರ್ಹತೆಗಳೇನು ?

40. ಉಚ್ಚ ನ್ಯಾಯಾಲಯವು ಅಧೀನ ನ್ಯಾಯಾಲಯಗಳ ಮೇಲೆ ಹೇಗೆ ನಿಯಂತ್ರಣ ಹೊಂದಿರುತ್ತದೆ ?

**V. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**6 × 3 = 18**

41. ಭಾರತದ ಸಂವಿಧಾನವು ನಮಗೆ ನೀಡಿರುವ ಮೂಲಭೂತ ಹಕ್ಕುಗಳು ಯಾವುವು ?

42. ರಾಜ್ಯನೀತಿ ನಿರ್ದೇಶಕ ತತ್ವಗಳಲ್ಲಿರುವ ಗಾಂಧಿವಾದದ ಅಂಶಗಳನ್ನು ಪಟ್ಟಿ ಮಾಡಿ.

43. ಭಾರತದ ಸಂವಿಧಾನದ ಪ್ರಸ್ತಾವನೆಯ ಮಹತ್ವವನ್ನು ವಿವರಿಸಿ.

44. ಮೂಲಭೂತ ಹಕ್ಕುಗಳ ಉಲ್ಲಂಘನೆಯಾದಾಗ ಸರ್ವೋಚ್ಚ ನ್ಯಾಯಾಲಯ ಹೊರಡಿಸುವ ಆಜ್ಞೆಗಳು ಯಾವುವು ?

45. ಹಳ್ಳಿಗಳ ಅಭಿವೃದ್ಧಿಗಾಗಿ ಗ್ರಾಮಪಂಚಾಯಿತಿಗಳು ಕೈಗೊಳ್ಳುವ ಕಾರ್ಯಕ್ರಮಗಳು ಯಾವುವು ?

46. ಕೇಂದ್ರ ಲೋಕಸೇವಾ ಆಯೋಗದ ಕಾರ್ಯಗಳೇನು ?

**VI. ಈ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 1 × 4 = 4**

47. ಭಾರತದ ಸಂವಿಧಾನದ ಪ್ರಧಾನ ಲಕ್ಷಣಗಳನ್ನು ವಿವರಿಸಿ.

DO NOT WRITE ANYTHING HERE